ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಮಸಾಸಂಇ : ಉ ನಿ : ಸುಮಪ : 2019–20 : ದಿನಾಂಕ: 30–11–2019

## SPECIAL MEDIA INVITATION

**1. The Chairpersons of the World Forum for Education Mr Bharatlal Meena and Dr Rupa Vasudevan have desired to meet Media Persons on December 1 at 12-30 P M at Hotel Lalith Ashok on Kumara Krupa Road.**

**Media Persons, representing Electronic and Print Media, are requested to kindly attend this LUNCHEON PRESS CONFERENCE, at which the salient features of the i2 c2 INTERNATIONAL INNOVATION AND CREATIVITY CONCLAVE, slated for December 2 and 3, will be disclosed.**

**D. P. MURALIDHAR**
**DEPUTY DIRECTOR ( NEWS )**

2. ಸಶಸ್ತ್ರ ಪಡೆಗಳ ಧ್ವಜ ದಿನಾಚರಣೆ – 2019 ರ ಕುರಿತಂತೆ
   ಪತ್ರಿಕಾಗೋಷ್ಠಿ:

   ಬ್ರಿಗೇಡಿಯರ್ ರವಿ ಮುನಿಸ್ವಾಮಿ (ನಿವೃತ್ತ),
   ನಿರ್ದೇಶಕರು,
   ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ,

   ದಿನಾಂಕ: 02–12–2019 ಸೋಮವಾರ ಸಮಯ: 12.30 ಗಂಟೆಗೆ

   ಸ್ಥಳ : ಬೆಂಗಳೂರು ಪ್ರೆಸ್ ಕ್ಲಬ್ ಆವರಣ, ಕಬ್ಬನ್ ಉದ್ಯಾನವನ, ಬೆಂಗಳೂರು.

<u>ಪತ್ರಿಕಾ ಪ್ರಕಟಣೆ</u>

# ಡಾಕ್ ಅದಾಲತ್

ಬೆಂಗಳೂರು, ನವೆಂಬರ್ 30 (ಕರ್ನಾಟಕ ವಾರ್ತೆ)

ಬೆಂಗಳೂರು ದಕ್ಷಿಣ ವಿಭಾಗದ ಡಾಕ್ ಅದಾಲತ್‌ನ್ನು ಡಿಸೆಂಬರ್ 16 ರಂದು ಬೆಳಿಗ್ಗೆ 11–00 ಗಂಟೆಗೆ ಜಯನಗರದ ಪ್ರಧಾನ ಅಂಚೆ ಕಚೇರಿಯಲ್ಲಿ ಏರ್ಪಡಿಸಲಾಗಿದೆ ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳಲು ಪ್ರಕಟಣೆ ತಿಳಿಸಿದೆ.

# ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

ಬೆಂಗಳೂರು, ನವೆಂಬರ್ 30 (ಕರ್ನಾಟಕ ವಾರ್ತೆ)

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. ದಿನಾಂಕ: 01–12–2019 ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಕಬ್ಬನ್ ಉದ್ಯಾನವನದ ಆವರಣದಲ್ಲಿ ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

2) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

I ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ

- ಬೆಳಿಗ್ಗೆ 7.00 ಗಂಟೆಯಿಂದ ಬೆಳಿಗ್ಗೆ 8.00 ಗಂಟೆಯವರೆಗೆ ಯೂನಿವರ್ಸ್ ಆರ್ಟ್ ಫೌಂಡೇಶನ್ ಸಂಸ್ಥೆಯ ಸಹಯೋಗದೊಂದಿಗೆ ಕುಮಾರಿ ಜೀವಿತ ರವರಿಂದ ಭರತನಾಟ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

**Workshop for developing food processing sector in and signing of MOU between CSIR-CFTRI and Food Karnataka Ltd, Government of Karnataka enterprise.**

In order to give further fillip to food processing in the State and to introduce innovative technologies developed by CFTRI to the prospective and existing food processing entrepreneurs, FPOs, Farmer Federations, a state level workshop is organised by FKL & KAPPEC on **"CFTRI technologies for developing food processing sector in Karnataka"** at Bangalore on 29.11.2019. Over 200 participants have attended the workshop. Shri. Rajender Kumar Kataria, IAS, Secretary, Agriculture & Horticulture Department, GOK inaugurated the workshop.

The workshop is an unique event, first of its kind in the country bringing synergy between CFTRI, a leading institution engaged in research and development of food technologies and Government Departments involved in aiding and encouraging establishment and development of agro food processing units in the State, with an ultimate objective of benefiting the farming community.

The journey started with the visit of the team led by Shri. Manoj Rajan, IFS, Special Secretary Food Processing & Harvest Technology to CFTRI recently. During the interactions, the idea of collaboration between both CFTRI and GOK was mooted. Translating the idea into action, the MOU is signed on this occasion to

facilitate the transfer of food technologies from laboratory to field for commercial exploitation, to provide training, DPR preparation and handholding the stakeholders for successful adoption of technologies.

Shri. B Shivaraju, MD, KAPPEC & FKL welcomed the dignitaries and the participants to the workshop and has briefly explained the background in which the present workshop is organised and also its benefits to the food processing sector, entrepreneurs, FPOs, Farmers and the related stakeholders.

Shri. Manoj Rajan explained the scope and salient features of the MOU and informed that the workshop will open up roads for the FPOs, Farmer Groups to make use of the innovative technologies developed by CFTRI on a massive scale. It will also address the current and emerging requirements in the food processing sector in the State by facilitating / handholding all the stakeholders through training and technology transfer to farmer groups, FPOs & Start-ups. The scope of MOU includes the enabling mechanism for providing infrastructural and financial support to the identified FPOs & food processing entrepreneurs.

Dr. KSMS Raghavarao, Director, CFTRI while delivering the keynote address, showcased the role and strategy of CFTRI in developing the food sector in the State. As a part of the workshop lectures were arranged on value addition to various agro commodities such as Millets, Fruits and Vegetables, Plantation Crops, Oil seeds, Spices etc including packaging and food safety.

Shri. B Venkatesh, Director of Horticulture, while addressing the participants has expressed happiness that the workshop will greatly benefit the horticulture sector in the State, a leader in producting fruits and vegetables in the country and suggested that such workshops should be organised in the different parts of the State on frequent intervals.

Smt. Nandini Kumari, Managing Director, Karnataka Antharaganga Micro Irrigation Corporation Ltd lauded the efforts of KAPPEC and FKL in organising the unique workshop and called upon the women entrepreneurs to come forward and utilise CFTRI technologies and establish food processing units.

Overall the workshop was very successful in conveying the message of the importance of food processing sector and also the various avenues available for food processing and value addition. The participants expressed their immense

satisfaction and urged both GOK & CFTRI to organise such interactive workshops at different parts of the State so that more and more farmers, food processing entrepreneurs get benefitted.

**ಆಹಾರ ಸಂಸ್ಕರಣಾ ವಲಯದ ಅಭಿವೃದ್ಧಿಗಾಗಿ ಕಾರ್ಯಾಗಾರ ಮತ್ತು ಸಿ.ಎಸ್.ಐ.ಆರ್ – ಸಿ.ಎಫ್.ಟಿ.ಆರ್.ಐ. ಮತ್ತು ಕರ್ನಾಟಕ ಸರ್ಕಾರದ ಉದ್ದಿಮೆಯ ಆಹಾರ ಕರ್ನಾಟಕ ನಿಯಮಿತದ ನಡುವೆ ಒಡಂಬಡಿಕೆ.**

**ಬೆಂಗಳೂರು, ನವೆಂಬರ್ 30 (ಕರ್ನಾಟಕ ವಾರ್ತೆ)**

ಆಹಾರ ಸಂಸ್ಕರಣಾ ಕ್ಷೇತ್ರವನ್ನು ರಾಜ್ಯದಲ್ಲಿ ಮತ್ತಷ್ಟು ಉತ್ತೇಜಿಸುವ ಮತ್ತು ಸಿ.ಎಫ್.ಟಿ.ಆರ್.ಐ. ಅಭಿವೃದ್ಧಿಪಡಿಸಿದ ನವೀನ ತಾಂತ್ರಿಕತೆಗಳನ್ನು ರಾಜ್ಯದ ಪ್ರಗತಿಪರ ಆಹಾರ ಸಂಸ್ಕರಣಾ ಉದ್ದಿಮೆದಾರರಿಗೆ, ರೈತರ ಉತ್ಪಾದನಾ ಸಂಸ್ಥೆಗಳಿಗೆ,(ಎಫ್.ಪಿ.ಓ) ಮತ್ತು ರೈತರ ಒಕ್ಕೂಟಗಳಿಗೆ ಪರಿಚಯಿಸುವ ಸಲುವಾಗಿ ರಾಜ್ಯಮಟ್ಟದ ಕಾರ್ಯಾಗಾರ "ಕರ್ನಾಟಕ ರಾಜ್ಯದ ಆಹಾರ ಸಂಸ್ಕರಣಾ ಕ್ಷೇತ್ರದ ಅಭಿವೃದ್ಧಿಗೆ ಸಿ.ಎಫ್.ಟಿ.ಆರ್.ಐ. ತಾಂತ್ರಿಕತೆಗಳು"ವನ್ನು ಬೆಂಗಳೂರಿನಲ್ಲಿ ದಿನಾಂಕ 29–11–2019ರಂದು ಆಹಾರ ಕರ್ನಾಟಕ ನಿಯಮಿತ ಮತ್ತು ಕೆಪೆಕ್ ಸಂಸ್ಥೆಯ ವತಿಯಿಂದ ಏರ್ಪಡಿಸಲಾಗಿತ್ತು. ಕಾರ್ಯಾಗಾರದಲ್ಲಿ 200ಕ್ಕೂ ಅಧಿಕ ಆಹಾರ ಸಂಸ್ಕರಣಾ ಕ್ಷೇತ್ರದ ಪಾಲುದಾರರು ಭಾಗವಹಿಸಿದ್ದರು. ಶ್ರೀ.ರಾಜೇಂದ್ರಕುಮಾರ್ ಕಟಾರಿಯಾ, ಕಾರ್ಯದರ್ಶಿಗಳು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ಇವರು ಕಾರ್ಯಾಗಾರವನ್ನು ಉದ್ಘಾಟಿಸಿದರು.

ಈ ಕಾರ್ಯಾಗಾರವು ದೇಶದಲ್ಲೇ ವಿಶಿಷ್ಟ ಮತ್ತು ಪ್ರಥಮ ಪ್ರಯತ್ನವಾಗಿದ್ದು, ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ತಂತ್ರಜ್ಞಾನ ಅಭಿವೃದ್ಧಿ ಕೆಲಸ ಕೈಗೊಳ್ಳುತ್ತಿರುವ ಸಿ.ಎಫ್.ಟಿ.ಆರ್.ಐ ಸಂಸ್ಥೆ ಹಾಗೂ ಕೃಷಿ ಮತ್ತು ಆಹಾರ ಸಂಸ್ಕರಣಾ ಉದ್ದಿಮೆಗಳ ಸ್ಥಾಪನೆಯನ್ನು ರಾಜ್ಯದಲ್ಲಿ ಉತ್ತೇಜಿಸುವ ಮತ್ತು ನೆರವು ನೀಡುವ ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆ ಈ ಎರಡು ಸಂಸ್ಥೆಗಳ ನಡುವೆ ಸಹಯೋಗ ಸ್ಥಾಪಿಸಿ ಅಂತಿಮವಾಗಿ ರಾಜ್ಯದ ಕೃಷಿಕರಿಗೆ ಅನುಕೂಲ ಕಲ್ಪಿಸುವುದು ಆಗಿತ್ತು.

ಈ ಒಂದು ಪಯಣವು ಮನೋಜ್ ರಾಜನ್, ಐ.ಎಫ್.ಎಸ್., ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಆಹಾರ ಸಂಸ್ಕರಣೆ ಮತ್ತು ಕಟಾವು ತಂತ್ರಜ್ಞಾನ ಇವರ ಮುಖಂಡತ್ವದಲ್ಲಿ ತಂಡವೊಂದು ಇತ್ತೀಚೆಗೆ ಸಿ.ಎಫ್.ಟಿ.ಆರ್.ಐ. ಸಂಸ್ಥೆಗೆ ಭೇಟಿ ನೀಡುವುದರೊಂದಿಗೆ ಪ್ರಾರಂಭವಾಗಿತ್ತು. ವಿಚಾರ ವಿನಿಯಮದ ಸಂದರ್ಭದಲ್ಲಿ ಸಿ.ಎಫ್.ಟಿ.ಆರ್.ಐ. ಮತ್ತು ಕರ್ನಾಟಕ ಸರ್ಕಾರದ ನಡುವೆ ಸಹಯೋಗ ಏರ್ಪಾಡು ಮಾಡಿಕೊಳ್ಳುವ ಬಗ್ಗೆ ಆಲೋಚಿಸಲಾಗಿತ್ತು. ಈ ಆಲೋಚನೆಯನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನವಾಗಿ ಒಡಂಬಡಿಕೆಗೆ ಸಹಿ ಮಾಡಲಾಗಿದ್ದು, ಆಹಾರ ಸಂಸ್ಕರಣಾ ತಾಂತ್ರಿಕತೆಗಳನ್ನು ಸಂಶೋಧನಾಲಯದಿಂದ ಕ್ಷೇತ್ರಕ್ಕೆ ವರ್ಗಾಯಿಸಿ ವಾಣಿಜ್ಯ ರೀತಿಯಲ್ಲಿ ಬಳಸಿಕೊಳ್ಳುವುದು, ತರಬೇತಿ ನೀಡುವುದು, ಯೋಜನಾ ವರದಿಗಳನ್ನು ಸಿದ್ಧಪಡಿಸುವುದು, ಪಾಲುದಾರರನ್ನು ಕೈಹಿಡಿದು ನಡೆಸುವ ಮುಖಾಂತರ ತಾಂತ್ರಿಕತೆಗಳನ್ನು ಯಶಸ್ವಿಯಾಗಿ ಅಳವಡಿಸಿಕೊಳ್ಳಲು ಪ್ರಯತ್ನಿಸಲಾಗಿದೆ ಎಂದು ತಿಳಿಸಿದರು.

ಬಿ.ಶಿವರಾಜು, ವ್ಯವಸ್ಥಾಪಕ ನಿರ್ದೇಶಕರು, ಕೆಪೆಕ್ ಮತ್ತು ಆಹಾರ ಕರ್ನಾಟಕ ನಿಯಮಿತ ಇವರು ಗಣ್ಯರನ್ನು ಮತ್ತು ಕಾರ್ಯಾಗಾರದಲ್ಲಿ ಪಾಲ್ಗೊಂಡವರನ್ನು ಸ್ವಾಗತಿಸಿ ಕಾರ್ಯಾಗಾರ ಆಯೋಜನೆಯ ಹಿನ್ನೆಲೆಯನ್ನು ವಿವರಿಸುತ್ತಾ, ಆಹಾರ ಸಂಸ್ಕರಣ ಕ್ಷೇತ್ರದ ಉದ್ದಿಮೆದಾರರು, ರೈತರ ಉತ್ಪಾದನಾ ಸಂಸ್ಥೆಗಳು, ರೈತರುಗಳು ಮತ್ತು ಇತರೆ ಸಂಬಂಧಿತ ಪಾಲುದಾರರು ಕಾರ್ಯಾಗಾರದ ಪ್ರಯೋಜನವನ್ನು ಪಡೆದುಕೊಳ್ಳಲು ಕೋರಿದರು.

ಮನೋಜ್ ರಾಜನ್ ಇವರು ಒಡಂಬಡಿಕೆಯ ವ್ಯಾಪ್ತಿ ಮತ್ತು ಮುಖ್ಯ ವೈಶಿಷ್ಟ್ಯತೆಗಳನ್ನು ವಿವರಿಸುತ್ತಾ, ಕಾರ್ಯಾಗಾರವು ರೈತರ ಉತ್ಪಾದನಾ ಸಂಸ್ಥೆಗಳು, ರೈತರ ಗುಂಪುಗಳಿಗೆ ಸಿಎಫ್‌ಟಿಆರ್‌ಐ ಅಭಿವೃದ್ಧಿಪಡಿಸಿರುವ ನವೀನ ತಾಂತ್ರಿಕತೆಗಳನ್ನು ದೊಡ್ಡ ಮಟ್ಟದಲ್ಲಿ ಬಳಸಿಕೊಳ್ಳುವ ರಹದಾರಿಯನ್ನು ಕಲ್ಪಿಸಿದೆ ಎಂದು ತಿಳಿಸಿದರು. ಒಡಂಬಡಿಕೆಯು ರಾಜ್ಯದಲ್ಲಿ ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿ ಪ್ರಸ್ತುತ ಇರುವ ಮತ್ತು ಮುಂಬರುವ ಸವಾಲುಗಳನ್ನು ಎದುರಿಸುವ ಪ್ರಯತ್ನವಾಗಿದ್ದು, ರೈತರ ಗುಂಪುಗಳಿಗೆ, ರೈತರ ಉತ್ಪಾದನಾ ಸಂಸ್ಥೆಗಳಿಗೆ ಮತ್ತು ನವೋದ್ಯಮಗಳಿಗೆ ತರಬೇತಿ ಮತ್ತು ತಾಂತ್ರಿಕತೆ ವರ್ಗಾವಣೆ ಮುಖಾಂತರ ಅನುಕೂಲ ಕಲ್ಪಿಸುವ ಮತ್ತು ಕೈಹಿಡಿದು ನಡೆಸುವ ಪ್ರಯತ್ನವಾಗಿರುತ್ತದೆ. ಒಡಂಬಡಿಕೆಯು ಗುರುತಿಸಲಾದ ರೈತರ ಉತ್ಪಾದನಾ ಸಂಸ್ಥೆಗಳಿಗೆ ಮತ್ತು ಆಹಾರ ಸಂಸ್ಕರಣಾ ಉದ್ದಿಮೆದಾರರಿಗೆ ಮೂಲಭೂತ ಸೌಕರ್ಯಗಳನ್ನು ಸೃಷ್ಟಿಸುವ ಮತ್ತು ಹಣಕಾಸಿನ ನೆರವನ್ನು ನೀಡುವ ವ್ಯವಸ್ಥೆ ಕಲ್ಪಿಸುವ ವ್ಯಾಪ್ತಿಯನ್ನು ಹೊಂದಿರುತ್ತದೆ.

ಡಾ. ಕೆ.ಎಸ್.ಎಂ.ಎಸ್. ರಾಘವರಾವ್, ನಿರ್ದೇಶಕರು, ಸಿ.ಎಫ್.ಟಿ.ಆರ್.ಐ. ಇವರು ತಮ್ಮ ಪ್ರಧಾನ ಭಾಷಣದಲ್ಲಿ ರಾಜ್ಯದ ಆಹಾರ ಸಂಸ್ಕರಣಾ ಕ್ಷೇತ್ರದ ಅಭಿವೃದ್ಧಿಗೆ ಸಿ.ಎಫ್.ಟಿ.ಆರ್.ಐ.ಸಂಸ್ಥೆಯ ಪಾತ್ರ ಮತ್ತು ಕಾರ್ಯಯೋಜನೆಯನ್ನು ವಿವರಿಸಿದರು. ಕಾರ್ಯಾಗಾರದ ಭಾಗವಾಗಿ ಕೃಷಿ ಉತ್ಪನ್ನಗಳಾದ ಸಿರಿಧಾನ್ಯಗಳು, ಹಣ್ಣು–ತರಕಾರಿಗಳು, ಪ್ಲಾಂಟೇಷನ್ ಬೆಳೆಗಳು, ಎಣ್ಣೆಕಾಳುಗಳು, ಸಾಂಬಾರ ಬೆಳೆಗಳು ಈ ಮುಂತಾದುವುಗಳ ಮೌಲ್ಯವರ್ಧನೆ, ಸಂಸ್ಕರಣೆ, ಪ್ಯಾಕಿಂಗ್ ಮತ್ತು ಆಹಾರ ಸುರಕ್ಷತೆಯ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು.

ಬಿ.ವೆಂಕಟೇಶ್, ತೋಟಗಾರಿಕಾ ನಿರ್ದೇಶಕರು, ಇವರು ತಮ್ಮ ಭಾಷಣದಲ್ಲಿ ಹಣ್ಣು ಮತ್ತು ತರಕಾರಿಗಳ ಉತ್ಪಾದನೆಯಲ್ಲಿ ದೇಶದಲ್ಲಿಯೇ ಮುಂಚೂಣಿಯಲ್ಲಿರುವ ರಾಜ್ಯದ ತೋಟಗಾರಿಕಾ ವಲಯಕ್ಕೆ ಕಾರ್ಯಾಗಾರವು ಉಪಯುಕ್ತವಾಗಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದರು. ಇಂತಹ ಕಾರ್ಯಾಗಾರಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಆಗ್ಗಿಂದಾಗ್ಗೆ ಏರ್ಪಡಿಸುವ ಅವಶ್ಯಕತೆಯ ಬಗ್ಗೆ ಸಲಹೆ ನೀಡಿದರು.

ಶ್ರೀಮತಿ. ನಂದಿನಿಕುಮಾರಿ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ನಿಯಮಿತ ಇವರು ಕೆಪೆಕ್ ಮತ್ತು ಆಹಾರ ಕರ್ನಾಟಕ ನಿಯಮಿತವು ಏರ್ಪಡಿಸಿರುವ ಈ ವಿಶಿಷ್ಟವಾದ ಕಾರ್ಯಾಗಾರವನ್ನು ಶ್ಲಾಘಿಸುತ್ತಾ ಮಹಿಳಾ ಉದ್ಯಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮುಂದೆ ಬಂದು ಸಿ.ಎಫ್.ಟಿ.ಆರ್.ಐ. ತಾಂತ್ರಿಕತೆಗಳನ್ನು ಬಳಸಿಕೊಂಡು ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಕರೆ ನೀಡಿದರು.

ಒಟ್ಟಾರೆಯಾಗಿ ಕಾರ್ಯಾಗಾರವು ಆಹಾರ ಸಂಸ್ಕರಣಾ ವಲಯದ ಮಹತ್ವ ಮತ್ತು ಆಹಾರ ಸಂಸ್ಕರಣೆ ಮತ್ತು ಮೌಲ್ಯವರ್ಧನೆಗೆ ಲಭ್ಯವಿರುವ ಅವಕಾಶಗಳ ಬಳಸಿಕೊಳ್ಳುವ ಸಂದೇಶವನ್ನು ತಲುಪಿಸುವಲ್ಲಿ ಯಶಸ್ವಿಯಾಗಿತ್ತು.

ಕಾರ್ಯಾಗಾರದಲ್ಲಿ ಭಾಗವಹಿಸಿದ ವಿವಿಧ ಪಾಲುದಾರರು ಅತೀವ ತೃಪ್ತಿ ವ್ಯಕ್ತಪಡಿಸುತ್ತಾ ಕರ್ನಾಟಕ ಸರ್ಕಾರ ಮತ್ತು ಸಿ.ಎಫ್.ಟಿ.ಆರ್.ಐ. ಈ ತರನಾದ ವಿಚಾರ ವಿನಿಮಯ ಕಾರ್ಯಾಗಾರವನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಏರ್ಪಡಿಸಿ ಹೆಚ್ಚು ಹೆಚ್ಚು ರೈತರು ಮತ್ತು ಆಹಾರ ಸಂಸ್ಕರಣಾ ಉದ್ದಿಮೆದಾರರು ಇದರ ಪ್ರಯೋಜನ ಪಡೆದುಕೊಳ್ಳಲು ನೆರವಾಗಬೇಕೆಂದು ಆಗ್ರಹಿಸಿದರು.

ಛಾಯಾಚಿತ್ರ ಲಗತ್ತಿಸಿದೆ)

## ಎಸಿಬಿ ದಾಳಿ

**ಬೆಂಗಳೂರು, ನವೆಂಬರ್ 30 (ಕರ್ನಾಟಕ ವಾರ್ತೆ)**

ಬೆಂಗಳೂರು ನಗರದ ನಿವಾಸಿಯೊಬ್ಬರು ಸರ್ಕಾರದಿಂದ ಐರಾವತ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿ ವಿದ್ಯಾವಂತ ಯುವಕರಿಗೆ ಕಾರನ್ನು ಖರೀದಿಸಲು ಸಬ್ಸಿಡಿ ಹಣ ಪಡೆದುಕೊಳ್ಳುವ ಸಲುವಾಗಿ ಅನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿಕೊಂಡಿರುತ್ತಾರೆ.

ಅರ್ಜಿದಾರರಿಗೆ ನಿಗದಿತ ಅವಧಿಯಲ್ಲಿ ಸರ್ಕಾರದಿಂದ ಸಬ್ಸಿಡಿ ಹಣ ಬಿಡುಗಡೆಯಾಗದೇ ಇರುವ ಕಾರಣ ಈ ಕುರಿತು ಮಾಹಿತಿಯನ್ನು ಪಡೆಯುವ ಸಲುವಾಗಿ ದಿನಾಂಕ: 18.11.2019 ರಂದು ರಾಜಾಜಿನಗರದಲ್ಲಿರುವ ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಕಛೇರಿಯಲ್ಲಿ ಶ್ರೀಮತಿ ಎ.ಸರೋಜಾದೇವಿ, ಜಿಲ್ಲಾ ವ್ಯವಸ್ಥಾಪಕರು, ಬೆಂಗಳೂರು ನಗರ ಜಿಲ್ಲೆ ರವರನ್ನು ಭೇಟಿ ಮಾಡಿ ವಿಚಾರಿಸಿದ್ದು ಅಗ ಅವರು ಎಲ್ಲಾ ಅಭ್ಯರ್ಥಿಗಳಿಗೆ ಸಬ್ಸಿಡಿ ಹಣ ಬಿಡುಗಡೆ ಮಾಡಲು ಸರ್ಕಾರದ ಬೊಕ್ಕಸದಲ್ಲಿ ಹಣ ಇರುವುದಿಲ್ಲ, ಆದ ಕಾರಣ ಈಗಾಗಲೇ ಕೆಲವು ರಿಜೆಕ್ಟ್ ಆಗಿರುವ ಅರ್ಜಿಗಳ ಬದಲಿಗೆ ಅರ್ಜಿದಾರರಿಗೆ ಸಬ್ಸಿಡಿ ಹಣ ಬಿಡುಗಡೆ ಮಾಡಲು ಸ್ವಲ್ಪ ಹಣ ಖರ್ಚು ಆಗುವುದಾಗಿ ಈ ಬಗ್ಗೆ ಹನುಮಂತು ರವರನ್ನು ಭೇಟಿ ಮಾಡಲು ತಿಳಿಸಿರುತ್ತಾರೆ.

ನಂತರ ದಿನಾಂಕ: 22.11.2019 ರಂದು ಅದೇ ಕಛೇರಿಯಲ್ಲಿ ಹನುಮಂತು ಎಂಬುವರನ್ನು ಭೇಟಿ ಮಾಡಿದಾಗ ಅವರು ರೂ.35,000/- ಗಳನ್ನು ನೀಡಬೇಕೆಂದು ಈ ಬಗ್ಗೆ ಶ್ರೀಮತಿ ಎ.ಸರೋಜಾದೇವಿ, ಜಿಲ್ಲಾ ವ್ಯವಸ್ಥಾಪಕರು ರವರನ್ನು ಬೇಟಿ ಮಾಡಲು ತಿಳಿಸಿದ್ದು ಆಗ ಅವರು ರೂ. 35,000 ಬದಲಿಗೆ ರೂ.30,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:29.11.2019 ರಂದು ಹನುಮಂತು ಖಾಸಗಿ ವ್ಯಕ್ತಿ ರವರು ಶ್ರೀಮತಿ. ಎ.ಸರೋಜಾದೇವಿ, ಜಿಲ್ಲಾ ವ್ಯವಸ್ಥಾಪಕರು ಪರವಾಗಿ ರೂ.25,000/- ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಶ್ರೀ ಜಿನೇಂದ್ರ ಖನಗಾವಿ, ಐಪಿಎಸ್, ಪೊಲೀಸ್ ಅಧೀಕ್ಷಕರು ಭ್ರಷ್ಟಾಚಾರ ನಿಗ್ರಹ ದಳ ಬೆಂಗಳೂರು ನಗರ ವಿಭಾಗ ಇವರ

ನೇತೃತ್ವದಲ್ಲಿ ಎಸಿಬಿ ಬೆಂಗಳೂರು ನಗರ ಠಾಣೆಯ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿರುತ್ತಾರೆ. ಇವರನ್ನು ತಪಾಸಣೆ ಕೈಗೊಂಡಾಗ ಹನುಮಂತು ಖಾಸಗಿ ವ್ಯಕ್ತಿ ರವರ ಬಳಿ ರೂ.20,000/– ನಗದು ಹಣ ಮತ್ತು ಶ್ರೀಮತಿ.ಎ.ಸರೋಜಾದೇವಿ ರವರ ಬಳಿ ರೂ.1,00,000/– ನಗದು ಪತ್ತೆಯಾಗಿರುತ್ತದೆ. ಇವರುಗಳನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ಹಾಗೂ ಆರೋಪಿತರ ಬಳಿ ಪತ್ತೆಯಾಗಿರುವ ನಗದು ಹಣವನ್ನು ಅಮಾನತ್ತು ಪಡಿಸಿಕೊಳ್ಳಲಾಗಿದ್ದು ಪ್ರಕರಣದ ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

## ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ಪರೀಕ್ಷೆ

ಬೆಂಗಳೂರು, ನವೆಂಬರ್ 30 (ಕರ್ನಾಟಕ ವಾರ್ತೆ)

ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ಪರೀಕ್ಷೆಯನ್ನು 2019 ರಲ್ಲಿ ಬೆಂಗಳೂರಿನಲ್ಲಿ ನಡೆಸಲು ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ಪರೀಕ್ಷಾ ಮಂಡಳಿಯು ನಿರ್ಧರಿಸಿದೆ. ಸದರಿ ಪರೀಕ್ಷೆಗೆ ಸ್ಥಳ ಮತ್ತು ದಿನಾಂಕಗಳನ್ನು ನಿಗದಿಪಡಿಸಿ ಅಭ್ಯರ್ಥಿಗಳಿಗೆ ತಿಳಿಸಲಾಗುವುದು. ಆಸಕ್ತ ಅಭ್ಯರ್ಥಿಗಳು ಪರೀಕ್ಷೆಯ ಅರ್ಜಿ ಮತ್ತು ಅನುಬಂಧಗಳನ್ನು ಕಾರ್ಯದರ್ಶಿಗಳು, ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ಪರೀಕ್ಷಾ ಮಂಡಳಿ, ಕಲ್ಯಾಣ ಸುರಕ್ಷಾ ಭವನ, ನೆಲ ಮಹಡಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029 ಇಲ್ಲಿಗೆ ಸಲ್ಲಿಸಲು ಸೂಚಿಸಿದೆ. ಬಾಯ್ಲರ್ ಆಪರೇಷನ್ ಇಂಜಿನಿಯರ್ಸ್ ಪರೀಕ್ಷೆಗೆ ಅರ್ಜಿ ಸಲ್ಲಿಸುವ ವಿಧಾನ ಹಾಗೂ ಈ ಪರೀಕ್ಷೆಗೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು ಈ ಇಲಾಖೆಯ ವೆಬ್‌ಸೈಟ್ www.karnataka.gov.in.esurakshate ಅಥವಾ **FBIS- Home page**ರಿಂದ ಪಡೆದುಕೊಳ್ಳಬಹುದಾಗಿದೆ.

Boiler Operation Engineers Examination

The Boiler Operation Engineers examination board has decided to conduct the next Boiler Operation Engineers Examination at Bangalore in the year 2019. The exact date and place of the examination will be intimated later to the candidates. Interested candidates can submit applications along with annexures to Secretary , Boiler Operation Engineer's Board, 2nd Floor, KalyanaSurakshaBhavana, Near Dairy Circle, Bannerughatta Road, Bangalore-560029. The candidates appearing for the said examination, may download the application form along with the instructions sheet from the official page in **FBIS-Homepage** or **website www.karnataka.gov.in.esurakshate**